# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಸಿದ್ದಾಪುರ

## ಸಿ.ಸಿ ನಂ. 153/2025

ಫಿರ್ಯಾದಿಃ ಸರ್ಕಾರ : ಪೋಲಿಸ್ ಉಪನಿರೀಕ್ಷಕರು, ಸಿದ್ದಾಪುರ ಪೋಲಿಸ್ ಠಾಣೆ

–ವಿರುದ್ಧ–

ಆರೋಪಿಃ ರಾಮಾ ಬೋವಿ ಬಂಗಾರ್ಯ, ನೆಜ್ಜೂರು, ಸಿದ್ದಾಪುರ ತಾಲ್ಲೂಕು.

ನಾನು **ಶ್ರೀ ಉಮೇಶ. ಎಮ್.ಪಿ. ಬಿ.ಎ.ಎಲ್., ಎಲ್.ಎಲ್.ಬಿ.,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ದಾಪುರ ಆದ ನಾನು, ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

## ದೋಷಾರೋಪಣೆ

ಮಾನ್ಯ ನ್ಯಾಯಾಲಯದ ವ್ಯಾಪ್ತಿಯ ಸಿದ್ದಾಪುರ ಪೋಲೀಸ ಠಾಣಾ ವ್ಯಾಪ್ತಿಯ ನೆಜ್ಜೂರು ಗ್ರಾಮದಲ್ಲಿ ದಿನಾಂಕ 26.11.2024 ರಂದು 3.30 ಗಂಟೆಗೆ ಫಿರ್ಯಾದಿಯೂ ತಮ್ಮ ಮನೆಗೆ ಬಂದಾಗ ಫಿರ್ಯಾದಿ ತಂಗಿ ತನ್ನ ಕೈಯಲ್ಲಿ ಇದ್ದ ಮೊಬೈಲನ್ನು ಕೆಳಗೆ ಬಿಳಿಸಿದಳು, ಆಗ ಫಿರ್ಯಾದಿಯ ಅಣ್ಣ ತನ್ನ ತಂಗಿಗೆ ಈ ಹಳೆ ಮೊಬೈಲನಲ್ಲಿ ಏನು ಮಾಡುತ್ತೀಯಾ ಎಂದು ಕೇಳಿ ಮೊಬೈಲನ್ನು ನೋಡಿದಾಗ ರಾಮ ಬೋವಿ ಬಂಗಾರ್ಯ ಆರೋಪಿತನಾದ ನೀನು ಫಿರ್ಯಾದಿಯ ತಂಗಿಯ ಮೊಬೈಲಿಗೆ ಕರೆನ್ಸಿಯನ್ನು ಹಾಕಿಸಿ ಅವಳೊಂದಿಗೆ ಮಾತಾನಾಡಿದ್ದು, ಫಿರ್ಯಾದಿಯ ಅಣ್ಣನು ತನ್ನ ತಂಗಿಯಲ್ಲಿ ಅವನ ಜೊತೆ ಯಾಕೆ ಮಾತನಾಡುತ್ತಿದ್ದಿಯಾ ಎಂದು ಬೈದಾಗ ತಂಗಿ ಮನೆಯಿಂದ ಹೊರಗೆ ಬಂದಾಗ ಆರೋಪಿತನಾದ ಬೈಕ್ ತೆಗೆದುಕೊಂಡು ಫಿರ್ಯಾದಿಯ ಮನೆಯ ಹತ್ತಿರ ಬಂದಿದ್ದನ್ನು ಕಂಡು ಯಾಕೆ ಬಂದಿದ್ದೀಯಾ ಎಂದು ಕೇಳಿದಕ್ಕೆ ಆರೋಪಿತನಾದ ನೀನು ಒಮ್ಮೇಲೆ ಸಿಟ್ಟಾಗಿ ಫಿರ್ಯಾದಿಗೆ ಕೈಯಿಂದ ಮೈಮೇಲೆ ಹೊಡೆದು ಕುತ್ತಿಗೆಯನ್ನು ಹಿಡಿದು ಸಾದಾ ಸ್ವರೂಪದ ಗಾಯ ನೋವು ಪಡಿಸಿ ಆ ಮೂಾಲಕ ಭಾರತೀಯ ನ್ಯಾಯ ಸಂಹಿತೆ ಕಲಂ.115(2) ನೇದರ ಅಡಿ ಶಿಕ್ಷಾರ್ಹ ಅಪರಾಧ ಎಸುಗಿರುವಿರೆಂದು ನಿನ್ನ ಮೇಲೆ ದೋಷಾರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ?

ಎರಡನೇಯದಾಗಿ ಅದೇ ದಿನ, ಅದೇ ಸಮಯ ಆರೋಪಿತನಾದ ನೀನು ಫಿರ್ಯಾದಿಯ ಮನೆಯ ಹತ್ತಿರ ಬಂದಿದ್ದನ್ನು ಕಂಡು ಯಾಕೆ ಬಂದಿದ್ದೀಯಾ ಎಂದು ಕೇಳಿದಕ್ಕೆ ಆರೋಪಿತನಾದ ನೀನು ಒಮ್ಮೆಲೆ ಸಿಟ್ಟಾಗಿ ಫಿರ್ಯಾದಿಯೂ ಮಹಿಳೆ ಎಂದು ಲೆಕ್ಕಿಸದೇ ಕೈಯಿಂದ ಮೈಮೇಲೆ ಹೊಡೆದು ಕುತ್ತಿಗೆಯನ್ನು ಹಿಡಿದು ನಿನ್ನನ್ನು ಏನು ಬೇಕಾದರೂ ಮಾಡುತ್ತೇನೆ ಎಂದು ಹೇಳಿ ಫಿರ್ಯಾದಿಯ ಮಾನಕ್ಕೆ ಕುಂದುಂಟು ಪಡಿಸುವ ಮಾಡುವ ಮೂಾಲಕ ಭಾರತೀಯ ನ್ಯಾಯ ಸಂಹಿತೆ ಕಲಂ. 74 ಕೆಳಗೆ ಶಿಕ್ಷಾರ್ಹ ಅಪರಾಧ ಎಸುಗಿರುವಿರೆಂದು ನಿನ್ನ ಮೇಲೆ ದೋಷಾರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ?

ಮೂರನೇಯಾದಾಗಿ ಅದೇ ದಿನ, ಅದೇ ಸಮಯ ಆರೋಪಿತನಾದ ನೀನು ಫಿರ್ಯಾದುದಾರಳನ್ನು ಉದ್ದೇಶಿಸಿ ಬೇವರ್ಷಿ, ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ದೇಶಪೂರ್ವಕ ಅವಮಾನಗೊಳಿಸಿ ಈ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.352 ಕೆಳಗೆ ಶಿಕ್ಷಾರ್ಹ ಅಪರಾಧ ಎಸುಗಿರುವಿರೆಂದು ನಿನ್ನ ಮೇಲೆ ದೋಷಾರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ?

ಕೊನೆಯಾದಾಗಿ ಅದೇ ದಿನ, ಅದೇ ಸಮಯ ಆರೋಪಿತನಾದ ನೀನು ಫಿರ್ಯಾದುದಾರಳನ್ನು ಉದ್ದೇಶಿಸಿ ನಿನ್ನನ್ನು ಏನು ಬೇಕಾದರೂ ಮಾಡುತ್ತೇನೆ, ನನ್ನ ಮೇಲೆ ಕಂಪ್ಲೆಂಟ್ ಕೊಟ್ಟರೆ ನಿನ್ನನ್ನು ಸಾಯಿಸುತ್ತೇನೆಂದು ಜೀವ ಬೆದರಿಕೆ ಹಾಕಿ ಈ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.351(3) ನೇದರ ಅಡಿ ಶಿಕ್ಷಾರ್ಹ ಅಪರಾಧ ಎಸುಗಿರುವಿರೆಂದು ನಿನ್ನ ಮೇಲೆ ದೋಷಾರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ?

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ದೋಷರೋಪಣೆ ತಿಳಿಯಿತೆ?

**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ?

**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **24-07-2025** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಪ್ರ. ಪ್ರ.ದ.ನ್ಯಾ ದಂ., ಸಿದ್ಧಾಪುರ**